

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಯಾವುದು ಸತ್ಯ, ಯಾವುದು ಮಿಥ್ಯ?....

**ಮಾ**ರ್ಚ್ ತಿಂಗಳು. ಬಿಸಿಲಿನ ದಗೆ. ಈ ವರ್ಷದ ವಿಶೇಷವೆಂದರೆ ರಾಜಕಾರಣಿಗಳಿಗೆ ಚುನಾವಣೆಯ ಬಿಸಿ. ಇವರು ಯಾವ ಪರೀಕ್ಷೆಗಾದರೂ ನೇರವಾಗಿ ಕುಳಿತುಕೊಳ್ಳಬಹುದು. ಇವರ ಪರೀಕ್ಷಾಮೌಲ್ಯಮಾಪಕರು ಬಹುತೇಕ ಅವಿದ್ಯಾವಂತರು. ಇನ್ನು ಪ್ರತಿವರ್ಷದಂತೆ ಹದಿಹರೆಯದವರಿಗೆ ಪರೀಕ್ಷೆಯ ಬಿಸಿ. ಹೆಚ್ಚಿನ ಅಂಕಗಳನ್ನು ಪಡೆಯಲು ಹೆತ್ತವರಿಂದ ಒತ್ತಡ. ವೃತ್ತಿಪರ ಕಾಲೇಜುಗಳಿಗೆ ಸೇರಬೇಕೆಂಬ ತವಕ. ಮುಂದೆ ಸಾಫ್ಟ್‌ವೇರ್ ಇಂಜಿನಿಯರೋ ಅಥವಾ ಡಾಕ್ಟರೋ ಆಗುವ ಹೊಂಗನಸು. ಕೆಲಸಕ್ಕೆ ಸೇರಿದ ಒಂದೇ ತಿಂಗಳಲ್ಲಿ ಅಪ್ಪ ನಿವೃತ್ತಿಯ ಅಂಚಿನಲ್ಲಿ ಎಣಿಸಿದ್ದಕ್ಕಿಂತ ಎಷ್ಟೋಪಟ್ಟು ಹೆಚ್ಚಿನ ಹಣ. ಕೈತುಂಬಾ ಹಣ ಸಂಪಾದನೆ ಮಾಡಿದರೆ ಮಾತ್ರ ಜೀವನದಲ್ಲಿ ಸ್ವರ್ಗ ಸುಖ ಸಿಗುತ್ತದೆಯೆಂಬ ಭ್ರಮಾಲೋಕದಲ್ಲಿ ವಿಹರಿಸುವ ಯುವಕ-ಯುವತಿಯರು. ಅಮೇರಿಕೆಗೆ ಹೋದ ಕೆಲವೇ ವರ್ಷಗಳಲ್ಲಿ ವಿರಸಗೊಂಡ ವೈವಾಹಿಕ ಜೀವನದಿಂದ ಜಿಗುಪ್ಸೆ, ಮಾನಸಿಕ ತೊಳಲಾಟ. ಬದುಕಿನ ಸವಾಲುಗಳನ್ನು ಎದುರಿಸಲು ಸಾಧ್ಯವಾಗದ ಖಿನ್ನತೆ. ಇದು ಇಂದು ಎದ್ದು ಕಾಣುತ್ತಿರುವ ಆಧುನಿಕ ಶಿಕ್ಷಣದ ಕಥೆಯ ವ್ಯಥೆ. 'ಸಾ ವಿದ್ಯಾ ಯಾ ವಿಮುಕ್ತಯೇ', 'ವಿದ್ಯಯಾಽಮೃತಮಶ್ನುತೇ', 'ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ', 'ನ ವಿತ್ತೇನ ತರ್ಪಣೀಯೋ ಮನುಷ್ಯಃ', 'ತ್ಯಾಗೇನೈಕೇನಾಮೃತತ್ವಮಾನಶುಃ' ಅಂದರೆ ಮುಕ್ತಿಯನ್ನು ದೊರಕಿಸಿಕೊಡುವುದೇ ನಿಜವಾದ ವಿದ್ಯೆ, ವಿದ್ಯೆಯಿಂದ ಅಮರತ್ವವನ್ನು ಪಡೆಯಬಹುದು, ಜ್ಞಾನಕ್ಕೆ ಸರಿಸಮಾನವಾದುದು ಪವಿತ್ರವಾದುದು ಮತ್ತೊಂದಿಲ್ಲ, ದುಡ್ಡಿನಿಂದ ಮನುಷ್ಯನನ್ನು ತೃಪ್ತಿಪಡಿಸಲು ಸಾಧ್ಯವಿಲ್ಲ, ತ್ಯಾಗದಿಂದ ಮಾತ್ರ ಅಮರತ್ವವನ್ನು ಪಡೆಯಲು ಸಾಧ್ಯ, ಇತ್ಯಾದಿ ಜೀವನ ಮೌಲ್ಯಗಳನ್ನು ಬೋಧಿಸುತ್ತಾ ಬಂದ ಈ ನಾಡಿನಲ್ಲಿ ಎಂತಹ ವಿಪರ್ಯಾಸವಿದು!

"ಸತ್ಯಂ ವದ, ಧರ್ಮಂ ಚರ" (ಸತ್ಯವನ್ನು ಹೇಳು, ಧರ್ಮದಂತೆ ನಡೆ). ಇದು ಸಾವಿರಾರು ವರ್ಷಗಳಿಂದ ಭಾರತೀಯರು ಕೇಳುತ್ತಾ ಬಂದಿರುವ ತೈತ್ತರೀಯ ಉಪನಿಷನ್ಮಂತ್ರ (1.11.1). ಹತ್ತಾರು ವರ್ಷಗಳ ಕಾಲ ಗುರುವಿನ ಪದತಲದಲ್ಲಿದ್ದು ವೇದೋಪನಿಷತ್ತುಗಳನ್ನೂ ವಿವಿಧ ಶಾಸ್ತ್ರಗಳನ್ನೂ ಅಧ್ಯಯನ ಮಾಡಿ ಸರ್ವಶಾಸ್ತ್ರಪಾರಂಗತನಾದ ಶಿಷ್ಯನನ್ನು ಆಶ್ರಮದಿಂದ ಬೀಳ್ಕೊಡುವಾಗ ಗುರುವು ಶಿಷ್ಯನಿಗೆ ಹೇಳಿದ ಅಪರೂಪದ ಕಿವಿಮಾತು (ವೇದಮನೂಚ್ಯ ಆಚಾರ್ಯೋಽಂತೇವಾಸಿನಂ ಅನುಶಾಸ್ತಿ). ಮನುಷ್ಯನು ಜೀವನದಲ್ಲಿ ಹೇಗೆ ಬಾಳಿ ಬದುಕಬೇಕೆಂದು ತಿಳಿಸಿಕೊಡುವ ಅತ್ಯುನ್ನತ ಜೀವನಮೌಲ್ಯ. ಒಂದು ಹಂತದ ಅಧ್ಯಯನ ಮುಗಿದರೂ ಅದೊಂದು ನಿರಂತರ ಕಲಿಕೆ. ಒಂದು ಜೀವಮಾನದಲ್ಲಿ ಮುಗಿಯುವಂತಹುದಲ್ಲ. ಆದಕಾರಣ 'ಸ್ವಾಧ್ಯಾಯದಿಂದ ಹಿಂದೆ ಸರಿಯಬೇಡ, ಸತ್ಯದಿಂದ ಹಿಂದೆ ಸರಿಯಬೇಡ, ಧರ್ಮದಿಂದ ಹಿಂದೆ ಸರಿಯಬೇಡ' (ಸ್ವಾಧ್ಯಾಯಾನ್ ಮಾ ಪ್ರಮದಃ ...... ಸತ್ಯಾನ್ ನ ಪ್ರಮದಿತವ್ಯಂ, ಧರ್ಮಾನ್ ನ ಪ್ರಮದಿತವ್ಯಂ) ಎಂದು ಒತ್ತಿ ಒತ್ತಿ ಹೇಳುವಲ್ಲಿ ಆಗಿನ ಕಾಲದ ಗುರುವಿಗೆ ಶಿಷ್ಯನ ಭವಿಷ್ಯಜೀವನದ ವಿಚಾರವಾಗಿ ಎಂತಹ ಕಾಳಜಿ ಇತ್ತು ಎಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಇಲ್ಲಿ ಸತ್ಯ ಮತ್ತು ಧರ್ಮ ಎಂಬ ಪದಗಳು ಬೇರೆ ಬೇರೆಯಾಗಿ ಕಂಡುಬಂದರೂ ಅವೆರಡೂ ತಾತ್ವಿಕವಾಗಿ ಒಂದೇ, ಬೇರೆ ಬೇರೆಯಲ್ಲ. ಸತ್ಯದ ಇನ್ನೊಂದು ಮುಖವೇ ಧರ್ಮ ಅಥವಾ ಸತ್ಯದ ಸಾಕ್ಷಾತ್ಕಾರವೇ ಧರ್ಮ. ಸತ್ಯ ಕೇವಲ ನುಡಿಯಾಗಿ ಉಳಿಯದೆ ನಡೆಯಾಗಿ ಗಟ್ಟಿಗೊಳ್ಳುವ ವಿಶಿಷ್ಟ ಪ್ರಕ್ರಿಯೆಯೇ ಧರ್ಮ. ಯಾವುದನ್ನು ನಾವು ಧರ್ಮ ಎಂದು ತಿಳಿದು ಗೌರವಿಸುತ್ತೇವೆಯೋ ಅದು ಸತ್ಯವನ್ನು ಬಿಟ್ಟು ಬೇರೆ ಅಲ್ಲ. ಇದನ್ನು ಇನ್ನೊಂದು ಪ್ರಮುಖ ಉಪನಿಷತ್ತಾದ ಬೃಹದಾರಣ್ಯಕವು ನಿರ್ದುಷ್ಟವಾದ ಶಬ್ದಗಳಲ್ಲಿ ಹೀಗೆ ಹೇಳುತ್ತದೆ: "ಯೋ ವೈ ಸ ಧರ್ಮಃ ಸತ್ಯಂ ವೈ ತತ್" (1.4.14). ಸತ್ಯವು ಧರ್ಮಕ್ಕಿಂತ ಬೇರೆಯಾಗಿರಲು ಸಾಧ್ಯವಿಲ್ಲ. ಹಾಗೇನಾದರೂ ಅದು ಬೇರೆ ಎಂದು ಕಂಡುಬಂದರೆ ಅದು ಸತ್ಯವಾಗಿರಲು ಸಾಧ್ಯವಿಲ್ಲ. ಸತ್ಯವನ್ನು ನುಡಿದರೆ ಧರ್ಮದಿಂದ ನಡೆದಂತೆ; ಧರ್ಮದಿಂದ ನಡೆದರೆ ಸತ್ಯವನ್ನು ನುಡಿದಂತೆ. ಆದ್ದರಿಂದ ಸತ್ಯ ಮತ್ತು ಧರ್ಮ ಎರಡೂ ಒಂದೇ ಹೊರತು ಬೇರೆ ಬೇರೆ ಅಲ್ಲ. (ಸತ್ಯಂ ವದಂತಂ ಆಹುಃ ಧರ್ಮಂ ವದತೀತಿ । ಧರ್ಮಂ ವಾ ವದಂತಂ ಸತ್ಯಂ ವದತೀತಿ).

ಸತ್ಯದ ಮುಖವಾಡ ಧರಿಸಿರುವ ಸುಳ್ಳು ಬಹಳ ಕಾಲ ನಿಲ್ಲುವುದಿಲ್ಲ. ಇಂದಲ್ಲ ನಾಳೆ ಅದರ ಮುಖವಾಡ ಕಳಚಿಬೀಳುತ್ತದೆ. ನಿಜ ಬಣ್ಣ ಬಯಲಾಗಿ ಅಧಾರ್ಮಿಕ ನಡವಳಿಕೆ ಎಂದು ಖಂಡನೆಗೆ ಗುರಿಯಾಗುತ್ತದೆ. ಸತ್ಯ ಮತ್ತು ಧರ್ಮ ಒಂದು ಜೋಡಿಯಾದರೆ ಅದರ ವಿರುದ್ಧವಾದ ಜೋಡಿ ಅಸತ್ಯ ಮತ್ತು ಅಧರ್ಮ. ಬಸವಣ್ಣನವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ "ಸತ್ಯವುಳ್ಳವಂಗೆ ಗುರುವಿಲ್ಲ, ಸತ್ಯವುಳ್ಳವಂಗೆ ಲಿಂಗವಿಲ್ಲ" ಎನ್ನುವುದನ್ನು ಒಪ್ಪದೆ "ಎನಗೆ ಸತ್ಯವೂ ಇಲ್ಲ, ಅಸತ್ಯವೂ ಇಲ್ಲ" ಎಂದು ಹೇಳಿ ಸತ್ಯಾಸತ್ಯವನ್ನು ಮೀರಿದ ನಿರ್ವಯಲ ಸ್ಥಿತಿಯನ್ನು ಮುಟ್ಟಿದವರಾಗಿದ್ದಾರೆ. ಅವರ ದೃಷ್ಟಿಯಲ್ಲಿ ಸತ್ಯವುಳ್ಳವಂಗೆ ಗುರುವಿಲ್ಲವೆಂದರೆ ಸತ್ಯಪಥದಲ್ಲಿ ಮುನ್ನಡೆಯುವವನಿಗೆ ಬೇರೊಬ್ಬ ಗುರುವಿನ ಅವಶ್ಯಕತೆ ಇಲ್ಲ ಎಂದರ್ಥವಲ್ಲ. ಅವನು ತನಗೆ ತಾನೇ ಗುರುವಾಗುತ್ತಾನೆ. ತನಗೆ ತಾನೇ ಲಿಂಗವಾಗುತ್ತಾನೆ. ಬೇರೊಬ್ಬರ ಬಾಳಿಗೆ ಬೆಳಕಾಗುತ್ತಾನೆ ಎಂದರ್ಥ. 'ಸತ್ಯವೆಂಬುದೆ ಹರನು, ಹರನೆಂಬುದೆ ಸತ್ಯ ಎರಡಿಲ್ಲ' ಎನ್ನುವ ರಾಘವಾಂಕನ ಹರಿಶ್ಚಂದ್ರ ಕಾವ್ಯದ ಸಾಲು ಇಲ್ಲಿ ಸ್ಮರಣೀಯ.

ಅಸತ್ಯ ಮತ್ತು ಅಧರ್ಮ ಮನುಷ್ಯನ ಸಹಜ ಸ್ವಭಾವ ಮತ್ತು ಪ್ರವೃತ್ತಿ ಎಂಬುದನ್ನು ವಿಜ್ಞಾನಿಗಳು ಒಪ್ಪುತ್ತಾರೆ: "Dishonesty is one defining characteristic of what it is to be human. It is not the only defining characteristic, but it does separate us from other animals. Some non-human species may have a limited capacity for deception, but humans have a flexible, unlimited capacity for deception….. We are, in a sense, built for dishonesty." ಅಂದರೆ ಮೋಸಮಾಡುವ ಅಸಾಧಾರಣ ಸಾಮರ್ಥ್ಯ ಮನುಷ್ಯನಿಗೆ ಇರುವಷ್ಟು ಪ್ರಾಣಿಗಳಿಗೆ ಇಲ್ಲ. ಅಪ್ರಾಮಾಣಿಕತೆಯು ಮನುಷ್ಯನ ಹುಟ್ಟುಗುಣ ಎನ್ನುವ ವಿಜ್ಞಾನಿಗಳ ಈ ಮಾತು ತುಂಬಾ ಗಮನಾರ್ಹ. ಆದರೆ ಆಧುನಿಕ ವಿಜ್ಞಾನಿಗಳು ಮಾಡಿದ ಈ ಸಂಶೋಧನೆ ಹೊಸದೆಂದು ಅನ್ನಿಸುವುದಿಲ್ಲ. ಇದೇ ಅರ್ಥವನ್ನು ಕೊಡುವ ಅತ್ಯಂತ ಕಾವ್ಯಮಯವಾದ ದೇವರ ದಾಸಿಮಯ್ಯನವರ ಈ ಕೆಳಗಿನ ವಚನವನ್ನು ನೋಡಿ:

**ಒಡಲುಗೊಂಡವ ಹಸಿವ, ಒಡಲುಗೊಂಡವ ಹುಸಿವ**
**ಒಡಲುಗೊಂಡವನೆಂದು ನೀನೆನ್ನ ಜಡಿದೊಮ್ಮೆ ನುಡಿಯದಿರಾ**
**ನೀನೆನ್ನಂತೊಮ್ಮೆ ಒಡಲುಗೊಂಡು ನೋಡಾ ರಾಮನಾಥಾ!**

ಶರೀರ ಧರಿಸಿದವನು ಹಸಿವೆಯಿಂದ ಕಂಗಾಲಾಗುವುದು ಮತ್ತು ಹೊಟ್ಟೆಪಾಡಿಗಾಗಿ ಸುಳ್ಳು ಹೇಳುವುದು ಸಹಜ. 'ಎಲೈ ದೇವರೇ ನೀನು ನನ್ನನ್ನು ಶರೀರ ಧರಿಸಿದವನೆಂದು ಏಕೆ ದೂಷಣೆಮಾಡುತ್ತೀಯಾ? ನನ್ನ ಹಾಗೆ ನೀನೂ ಒಂದು ಶರೀರವನ್ನು ಧರಿಸಿ ನೋಡು, ಆಗ ನಿನಗೆ ಗೊತ್ತಾಗುತ್ತದೆ ನನ್ನ ಕಷ್ಟ ಏನೆಂಬುದು' ಎಂದು ದೇವರ ದಾಸಿಮಯ್ಯನವರು ನಿರಾಕಾರನಾದ ದೇವರಿಗೆ ಜೀವಾತ್ಮನ ತೊಳಲಾಟವನ್ನು ಈ ವಚನದಲ್ಲಿ ಮನೋಜ್ಞವಾಗಿ ಮನದಟ್ಟುಮಾಡಿಕೊಟ್ಟಿದ್ದಾರೆ. ಶಾರೀರಿಕ ಕ್ರಿಯೆಗಳಲ್ಲಿ ಮನುಷ್ಯನಿಗೂ ಮತ್ತು ಪ್ರಾಣಿಗಳಿಗೂ ಸಮಾನವಾದ ಅನೇಕ ಗುಣಧರ್ಮಗಳಿವೆ (ಆಹಾರ-ನಿದ್ರಾ-ಭಯ-ಮೈಥುನಂ ಚ ಸಮಾನಮೇತತ್ ಪಶುಭಿರ್ನರಾಣಾಮ್). ಆದರೆ ಎಷ್ಟೋ ವೇಳೆ ಮನುಷ್ಯನು ಪ್ರಾಣಿಗಳಿಗಿಂತಲೂ ಕಡೆಯಾಗಿ ವರ್ತಿಸುತ್ತಾನೆ. ಅವನು ಕೇವಲ ಹೊಟ್ಟೆಪಾಡಿಗಾಗಿ ಸುಳ್ಳು ಹೇಳಿದ್ದರೆ ಪರವಾಗಿದ್ದಿಲ್ಲ. ಹೊಟ್ಟೆ ತುಂಬಿದ ಮೇಲೂ ಸುಳ್ಳು ಹೇಳುತ್ತಾನೆ.

ಮೇಲ್ನೋಟಕ್ಕೆ ಮೋಸ, ವಂಚನೆ, ಕಪಟತನ ಪ್ರಾಣಿಗಳಲ್ಲಿ ಇವೆಯೆಂದು ಕಂಡುಬಂದರೂ ಅವು ಹೊಟ್ಟೆ ಹಸಿವಾದಾಗ ಮಾತ್ರ ಬೇಟೆಯಾಡಲು ಬಳಸುವ ತಂತ್ರಗಾರಿಕೆಗಳಾದ್ದರಿಂದ ಮನುಷ್ಯರಂತೆ ಗೊತ್ತಿದ್ದೂ ದುರಾಸೆಯಿಂದ ಮಾಡುವ ಕೆಟ್ಟ ಪ್ರವೃತ್ತಿ ಅಲ್ಲ ಎಂಬುದು ವಿಜ್ಞಾನಿಗಳ ಸ್ಪಷ್ಟ ಅಭಿಪ್ರಾಯ. ಮನುಷ್ಯರಂತೆ ಪ್ರಾಣಿಗಳಲ್ಲಿ ನಿಜವಾದ ಮೋಸ, ವಂಚನೆ, ಕಪಟತನ ಇವೆಯೆಂದು ವಿಜ್ಞಾನಿಗಳು ಒಪ್ಪಿಕೊಳ್ಳಲು ಸಿದ್ಧರಿಲ್ಲ. ಹೊಟ್ಟೆ ತುಂಬಿದ ಮೇಲೆ ಹಾಯಾಗಿ ಮಲಗಿರುವ ಸಿಂಹ ಅಥವಾ ಹುಲಿ ತನ್ನ ಮುಂದೆ ನೂರಾರು ಜಿಂಕೆಗಳು ಓಡಾಡಿದರೂ ಏನೂ ಮಾಡುವುದಿಲ್ಲ. ಮಾರನೆಯ ದಿನದ ಹಸಿವನ್ನು ತಣಿಸಿಕೊಳ್ಳಲು ಬೇಕೆಂದು ಅವುಗಳನ್ನು ಬೇಟೆಯಾಡುವುದಿಲ್ಲ! ಕೀಟಲೆಗಾಗಿಯೂ ತೊಂದರೆ ಕೊಡುವುದಿಲ್ಲ. ಇದಕ್ಕೆ ತದ್ವಿರುದ್ಧವಾದುದು ಮನುಷ್ಯನ ಸ್ವಭಾವ. ಅಪಾಮಾರ್ಗಗಳಿಂದ ಗಳಿಸುವ ಹಣ ಮತ್ತು ಆಸ್ತಿ ಅವನಿಗೆ ಎಷ್ಟಿದ್ದರೂ ಬೇಕು. ತನಗಷ್ಟೇ ಅಲ್ಲ ತನ್ನ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ತಿಂದರೂ ಸವೆಯದಷ್ಟು ಬೇಕು. ವಯಸ್ಸಾದ ಮೇಲೆ ತನಗೇ ತಿನ್ನಲು ಏನೂ ಸಿಗದಂತೆ ಅವರು ಮಾಡುತ್ತಾರೆಂಬ ಅರಿವು ಈ 'ಕಡುಜಾಣ'ನಿಗಿರುವುದಿಲ್ಲ!

ಸುಳ್ಳು, ಮೋಸ, ವಂಚನೆ, ಕಪಟತನ ಇವು ನಾಲ್ಕುವರ್ಷದ ಮಗುವಿನಲ್ಲಿಯೇ ಗೋಚರಿಸುತ್ತವೆ. ಇದಕ್ಕೆ ನಿದರ್ಶನವಾಗಿ ಮಕ್ಕಳು ಆಡುವ 'ಕಣ್ಣಾಮುಚ್ಚಾಲೆ' ಆಟವನ್ನು ಉದಾಹರಿಸಬಹುದು. ಓರಿಗೆಯ ಹುಡುಗನ ಊಹೆಗೆ ನಿಲುಕದ ಜಾಗದಲ್ಲಿ ಗೊತ್ತಿಲ್ಲದಂತೆ ಬಚ್ಚಿಟ್ಟುಕೊಳ್ಳುವ ಈ ಕ್ಷಮತೆಯನ್ನು ಬುದ್ಧಿಚಾತುರ್ಯ (mental skill) ಎನ್ನಬಹುದು. ಯಾವುದೇ ಆಟದ ಆರಂಭದಲ್ಲಿ ಟಾಸ್ ಹಾಕುವಂತೆ ಹಳ್ಳಿಯ ಮಕ್ಕಳು ಒಂದು ಕೈಯಲ್ಲಿ ಹುಣಿಸೇಬೀಜವನ್ನಿಟ್ಟುಕೊಂಡು ಎರಡೂ ಕೈಗಳನ್ನು ಬೆನ್ನಹಿಂದೆ ತೆಗೆದುಕೊಂಡು ಹೋಗಿ ಕೈಬದಲಾಯಿಸಿ ಅಡ್ಡಲಾಗಿ ಮುಷ್ಟಿ ಹಿಡಿದು ಓರಿಗೆಯ ಹುಡುಗರಿಗೆ ಯಾವುದರಲ್ಲಿ ಇದೆಯೆಂದು ಸುಲಭವಾಗಿ ಗುರುತಿಸಲು ಸಾಧ್ಯವಾಗದಂತೆ ತಬ್ಬಿಬ್ಬಾಗಿಸುತ್ತಾರೆ. ಈ ಆಟಗಳಲ್ಲಿ ಯಾವ ತಪ್ಪೂ ಇಲ್ಲ. ಎಳೆಯ ವಯಸ್ಸಿನಲ್ಲಿ ಆಡುವ ಈ ಆಟಗಳು ಒಂದು 'ಮೋಜು'. ಮಕ್ಕಳು ಈ ಆಟ ಆಡಬಾರದೆಂದು ಹೇಳುತ್ತಿಲ್ಲ. ಆದರೆ ಇದು ಮೇಲ್ನೋಟಕ್ಕೆ 'fun' ಎಂದು ಕಂಡುಬಂದರೂ ತಂದೆತಾಯಂದಿರು ಎಚ್ಚರ ವಹಿಸಿ ಬಾಲ್ಯದಲ್ಲಿ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡದೇ ಹೋದರೆ ಮುಂದೊಂದು ದಿನ ಅವರು ಮಾಡುವ ದೊಡ್ಡ ದೊಡ್ಡ ಮೋಸ, ವಂಚನೆಗಳಿಗೆ 'ಅಂಕುರಾರ್ಪಣ'ವಿದೆಂದು ಪರಿಗಣಿಸಬೇಕಾಗುತ್ತದೆ. ನವನಾಗರೀಕತೆಯ ಜೀವನವೇ ಒಂದು 'ಕಣ್ಣಾಮುಚ್ಚಾಲೆ'ಯಾಟವಾಗಿ ಇಡೀ ಪ್ರಪಂಚವೇ ಒಂದು 'ಮೋಸ'ದ ಜಾಲವಾಗಿ ಪರಿಣಮಿಸಿದೆ.

ಸತ್ಯವನ್ನು ಹೇಳುವವನು ಹೇಳಿದ್ದನ್ನು ನೆನಪಿಟ್ಟುಕೊಳ್ಳಬೇಕಾಗಿಲ್ಲ. ಏಕೆಂದರೆ ಸತ್ಯ ಎಂದೂ ಬದಲಾಗುವುದಿಲ್ಲ ಎಂಬ ಸೂಕ್ತಿಯೊಂದು ಇದೆ. ಸುಳ್ಳು ಹೇಳುವವನ ಸ್ಥಿತಿ ಹಾಗಲ್ಲ. ಸುಳ್ಳಿಗೆ ಮತ್ತೊಂದು ಸುಳ್ಳನ್ನು ಪೋಣಿಸಿ ಸುಳ್ಳಿನ ಸುಳಿಯಲ್ಲಿ ಸಿಕ್ಕಿಹಾಕಿಕೊಳ್ಳುತ್ತಾನೆ. ಮನುಷ್ಯರು ಸುಳ್ಳನ್ನು ಏಕೆ ಹೇಳುತ್ತಾರೆ. ಅದಕ್ಕೂ ಮುಂಚೆ ಸತ್ಯ ಎಂದರೇನು? ಇದ್ದುದನ್ನು ಇದ್ದಂತೆ ಹೇಳುವುದು. 'ಇದ್ದದ್ದ ಇದ್ದಂಗೆ ಹೇಳಿದರೆ ಸಿದ್ದಪ್ಪನಿಗೆ ಸಿಡಿಲು ಬಡಿದಿತ್ತಂತೆ!' ಎಂಬ ಗಾದೆ ಮಾತನ್ನು ನೀವು ಕೇಳಿರಬಹುದು. ಮಹಿಳೆಯೊಬ್ಬಳು ತವರು ಮನೆಯಿಂದ ಬಂದ ಆಸ್ತಿಯನ್ನು ಮಾರಾಟಮಾಡಿ ಬಂದ ಹಣದಲ್ಲಿ 3 ಲಕ್ಷ ರೂ.ಗಳನ್ನು ಮಗಳ ಮದುವೆಗೆಂದು ಬ್ಯಾಂಕಿನಲ್ಲಿ ಡಿಪಾಸಿಟ್ ಮಾಡಲು ಬಯಸಿದ್ದಳು. ವಿಷಯ ತಿಳಿದು ಆಕೆಯ ಅಣ್ಣ ತನ್ನ ಕಷ್ಟವನ್ನು ಹೇಳಿಕೊಂಡು ಬ್ಯಾಂಕಿಗಿಂತಲೂ ಹೆಚ್ಚಿನ ಬಡ್ಡಿ ಕೊಡುವುದಾಗಿ ಹೇಳಿ ಆ ಹಣವನ್ನು ಸಾಲವಾಗಿ ಪಡೆದ. ಕೆಲವು ವರ್ಷಗಳ ನಂತರ ಮಗಳ ಮದುವೆ ನಿಶ್ಚಯವಾಯಿತು. ಹಣ ಕೇಳಿದರೆ ಅಣ್ಣ ಕೊಡುತ್ತಿಲ್ಲ. ಒತ್ತಾಯಪಡಿಸಿದರೆ ನೀನು ಏನು ಮಾಡಿಕೊಳ್ಳುತ್ತೀಯೋ ಮಾಡಿಕೋ ಹೋಗು ಎಂಬ ಬಿರುನುಡಿ. ಕೋರ್ಟಿಗೆ ಹೋಗಲು ಅಣ್ಣನಿಂದ ಬರೆಸಿಕೊಂಡ ಯಾವ ಕಾಗದಪತ್ರಗಳೂ ಇಲ್ಲ. ಅಣ್ಣನೆಂಬ ಪ್ರೀತಿ-ವಿಶ್ವಾಸದಲ್ಲಿ ನಡೆದ ವ್ಯವಹಾರ. ಬೇರೆ ದಾರಿಕಾಣದೆ ಆ ಮಹಿಳೆ ನಮಗೆ ದೂರು ಸಲ್ಲಿಸಿದಳು. ನಮ್ಮ 'ಸದ್ಧರ್ಮ

ನ್ಯಾಯಪೀಠ'ದಿಂದ ಆತನಿಗೆ ನೋಟೀಸು ಹೋಯಿತು. ವಿಚಾರಣೆಗೆ ಹಾಜರಾದ ಆ ವ್ಯಕ್ತಿ ಮರುಮಾತನಾಡದೆ ಒಪ್ಪಿಕೊಂಡ. ಕೆಲವಾರು ತಿಂಗಳ ಕಾಲಾವಕಾಶ ಕೇಳಿ ಪೂರಾ ಹಣವನ್ನು ಪಾವತಿಸಿದ. ಇದು ನಮ್ಮ ನ್ಯಾಯಪೀಠದ ಹೆಗ್ಗಳಿಕೆ ಎನ್ನುವುದಕ್ಕಿಂತ ಧರ್ಮಪೀಠದ ಮುಂದೆ ಸುಳ್ಳು ಹೇಳಬಾರದೆಂಬ ಅವನ ಧಾರ್ಮಿಕ ಶ್ರದ್ಧೆ.

ಹೀಗೆ ವ್ಯವಹಾರದಲ್ಲಿ ಬಹಳ ಸರಳವಾಗಿ ಕಾಣುವ ಸತ್ಯ ದಾರ್ಶನಿಕರನ್ನು ತುಂಬಾ ಕಾಡಿಸಿದೆ. 'ಬ್ರಹ್ಮ ಸತ್ಯಂ ಜಗನ್ ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ'. ಈ ಜಗತ್ತಿನಲ್ಲಿ ಬ್ರಹ್ಮತತ್ವ ಒಂದೇ ಸತ್ಯ, ಉಳಿದುದೆಲ್ಲವೂ ಮಿಥ್ಯ, ಜೀವ ಆ ಪರಬ್ರಹ್ಮವಲ್ಲದೆ ಬೇರೆ ಅಲ್ಲ ಎನ್ನುವ ಅದ್ವೈತಸಿದ್ಧಾಂತದ ಪ್ರತಿಪಾದಕರಾದ ಶಂಕರಾಚಾರ್ಯರು ಒಮ್ಮೆ ಶಿಷ್ಯರೊಂದಿಗೆ ದಾರಿಯಲ್ಲಿ ಹೋಗುವಾಗ ಕಾಡಾನೆಯೊಂದು ಅಟ್ಟಿಸಿಕೊಂಡು ಬಂತು. ಎಲ್ಲರೂ ಪ್ರಾಣಭಯದಿಂದ ಸುರಕ್ಷಿತ ತಾಣಕ್ಕೆ ಓಡಿದರು. 'ಈ ಜಗತ್ತು ಮಾಯೆ, ಅನಿತ್ಯ ಎನ್ನುವುದಾದರೆ ನೀವು ಓಡಿದಿರೇಕೆ?' ಎಂದು ಜಾಣ ಶಿಷ್ಯನೊಬ್ಬ ಕೇಳಿದ. ಅದಕ್ಕೆ ಶಂಕರಾಚಾರ್ಯರು ಕೊಟ್ಟ ಉತ್ತರ: 'ಆನೆ ಬಂದಿದ್ದೂ ಮಾಯೆ, ನಾನು ಓಡಿದ್ದೂ ಮಾಯೆ!' ಇದು ಒಂದು ದಂತ ಕಥೆ. ಆದಿ ಶಂಕರರು ಈ ಜಗತ್ತನ್ನು ಯಾವ ಅರ್ಥದಲ್ಲಿ 'ಮಾಯೆ' ಎಂದು ಹೇಳಿದರೆಂದು ಬಹಳ ಜನರಿಗೆ ಸರಿಯಾಗಿ ಗೊತ್ತಿಲ್ಲ. ಶಂಕರರು ನಮ್ಮ ಕಣ್ಮುಂದೆ ಕಾಣುವ ಈ ಜಗತ್ತನ್ನು ಇಲ್ಲವೇ ಇಲ್ಲವೆಂದು ಪ್ರತಿಪಾದಿಸಿಲ್ಲ. ಕನ್ನಡದಲ್ಲಿ 'ಸತ್ತ' ಎಂದರೆ ಮರಣಹೊಂದಿದ ಎಂದರ್ಥ. ಸಂಸ್ಕೃತದಲ್ಲಿ 'ಸತ್ತಾ' ಎಂದರೆ 'ಇರುವಿಕೆ' (Existence) ಎಂದರ್ಥ. ಶಂಕರರ ಪ್ರಕಾರ ಈ ಇರುವಿಕೆ ಮೂರು ತೆರನಾಗಿದೆ: 1. ಪ್ರಾತಿಭಾಸಿಕ ಸತ್ (Illusory Existence) 2. ವ್ಯಾವಹಾರಿಕ ಸತ್ (Empirical Existence) ಮತ್ತು 3. ಪಾರಮಾರ್ಥಿಕ ಸತ್ (Spiritual Existence). ಮನುಷ್ಯ ಮಬ್ಬುಗತ್ತಲಲ್ಲಿ ದಾರಿಯಲ್ಲಿ ಹೋಗುವಾಗ ಹಗ್ಗವನ್ನು ಹಾವೆಂದು ಭ್ರಮಿಸಿ ಬೆಚ್ಚಿಬೀಳುತ್ತಾನೆ ಅಥವಾ ಮಲಗಿದ್ದಾಗ ಕನಸಿನಲ್ಲಿ ಹುಲಿಯನ್ನು ಕಂಡು ಗಾಬರಿಗೊಳ್ಳುತ್ತಾನೆ. ನಂತರ ಎಚ್ಚರಗೊಂಡಾಗ ತಾನು ಕಂಡದ್ದು ನಿಜವಾದ ಹಾವಲ್ಲ ಹಗ್ಗ, ಹುಲಿಯಲ್ಲ ಕನಸು ಎಂಬ ಅರಿವು ಮೂಡಿ ಸಮಾಧಾನಪಟ್ಟುಕೊಳ್ಳುತ್ತಾನೆ. ಆದರೆ ಭ್ರಮಾಸ್ಥಿತಿಯಲ್ಲಿ ಹಗ್ಗದಲ್ಲಿ ಕಂಡ ಹಾವಿಗೂ, ನಿದ್ರಾವಸ್ಥೆಯಲ್ಲಿ ಕಂಡ ಕನಸಿನ ಹುಲಿಗೂ ಒಂದು ಅಸ್ತಿತ್ವ ಇದೆ. ಅದೇ 'ಪ್ರಾತಿಭಾಸಿಕ ಸತ್'. ಹಾಗೇನೆ ವ್ಯವಹಾರದಲ್ಲಿ ಕಾಣಬರುವ ಈ ಜಗತ್ತು ಇದ್ದೇ ಇದೆ. ಇಲ್ಲವೆಂದಲ್ಲ. ಆದರೆ ಅದು ಹಗ್ಗದಲ್ಲಿ ಕಂಡ ಹಾವಿನಂತೆ, ಕನಸಿನಲ್ಲಿ ಕಂಡ ಹುಲಿಯಂತೆ. ಇದು ಆತ್ಯಂತಿಕ ಸತ್ಯ (Absolute Truth) ಅಲ್ಲ. ನಿತ್ಯಸತ್ಯವಾದ ಬ್ರಹ್ಮತತ್ವದ ಮೇಲೆ ಈ ಪ್ರಪಂಚ ಮಿಥ್ಯಾರೋಪಗೊಂಡಿದೆ (superimposition). ಮದುವೆಯಾಗುವ ಹುಡುಗಿಯ ಮುಖವನ್ನು ಅಂದವಾಗಿ ಕಾಣುವಂತೆ ಮಾಡುವ ಆಧುನಿಕ photographic trick ನಂತೆ! ಆ ಬ್ರಹ್ಮತತ್ವದ ಅರಿವು ಉಂಟಾದಾಗ ಮಾತ್ರ ಈ ಪ್ರಪಂಚ ಮಿಥ್ಯೆ ಎಂದು ಗೋಚರಿಸುತ್ತದೆ. ಅಲ್ಲಿಯವರೆಗೂ ಈ ಪ್ರಪಂಚಕ್ಕೆ ಒಂದು ಅಸ್ತಿತ್ವವಿದೆ. ಅದುವೇ 'ವ್ಯಾವಹಾರಿಕ ಸತ್'. ಈ ವ್ಯಾವಹಾರಿಕ ಸತ್ಯದ ಆಚೆ ಇರುವ ನಿತ್ಯಸತ್ಯವೇ 'ಪಾರಮಾರ್ಥಿಕ ಸತ್'. ಅದರ ಸಾಕ್ಷಾತ್ಕಾರವೇ ಮನುಷ್ಯನ ಜೀವನದ ಪರಮಗುರಿ!

18.3.2009

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑